**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಅಂಕೋಲಾ.**

ಸಿ.ಸಿ.ನಂ.269/2022

**ಫಿರ್ಯಾದುದಾರರುಃ** ಸುಪ್ರಭಾತಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಅಂಕೋಲಾ.

ವಿರುಧ್ಧ

**ಆರೋಪಿ** : ಶ್ರೀ ಗಣಪತಿ ಮಾಧವ ಬಾನಾವಳಿಕರ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿಯ ಮುಂದುವರೆದ ಹೇಳಿಕೆಃ**

ಪ್ರ.1 . ನೀವು ಫಿರ್ಯಾದಿ ಪರ ಸಾಕ್ಷ್ಯವನ್ನು ಕೇಳಿದ್ದೀರಾ?
ಉತ್ತರಃ ಕೇಳಿಕೊಂಡಿರುತ್ತೇನೆ

ಪ್ರ.2 . ಫ್ರಾ.ಸಾ.1 ರವರು ತಮ್ಮ ಸಾಕ್ಷ್ಯದಲ್ಲಿ ಪಿರ್ಯಾದಿ ಸಂಸ್ಥೆ ನೊಂದಾಯಿತ ಸಂಸ್ಥೆಯಾಗಿದ್ದು ಈ ಕೆಸ್ ನ್ನು ನಡೆಸಲು ಠರಾವು ಹೊರಡಿಸಿ ಪಿರ್ಯಾದಿ ಅಧಿಕಾರ ನೀಡಿರುತ್ತಾರೆ ಹಾಗೂ ದಿನಾಂಕ 01-01-2013 ರಂದು ಶ್ರೀ ನಾಗರಾಜ ವಿಠೋಬ ಬಾನಾವಳಿಕರ ಬೇಲೆಕೇರಿ ರವರು ರೂ. 10,30,000/- ಹಣವನ್ನು ಫಿರ್ಯಾದಿಯಿಂದ ವಿ.ಎಲ್. ಅಕೌಂಟ ನಂಬರ 438 ರಡಿಯಲ್ಲಿ ಸಾಲದ ಕರಾರು ಹಾಗೂ ಇತರ ಪತ್ರಗಳನ್ನು ಬರೆದುಕೊಟ್ಟು ಸಾಲವಾಗಿ ಪಡೆದುಕೊಂಡು, ಸದ್ರಿ ಸಾಲಕ್ಕೆ ನೀವು ಮತ್ತು ಬೋಳಾ ನಾಗಪ್ಪ ಕುಡ್ತಳಕರ ರವರು ಜಾಮೀನು ನೀಡಿ ನಿಗದಿತ ಸಮಯದಲ್ಲಿ ಸಾಲ ಮತ್ತು ಬಡ್ಡಿ ಹಣವನ್ನು ಫಿರ್ಯಾದಿ ಸಂಸ್ಥೆಗೆ ತುಂಬುವುದಾಗಿ ಒಪ್ಪಿರುತ್ತೀರಿ ಎಂದು ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರಃ ಸುಳ್ಳು

ಪ್ರ.3 . ಫ್ರಾ.ಸಾ.1 ರವರು ತಮ್ಮ ಸಾಕ್ಷ್ಯದಲ್ಲಿ ಸದರಿ ಸಾಲಗಾರರು ಒಪ್ಪಿದಂತೆ ಸಾಲದ ಮೊತ್ತ ಹಾಗೂ ಬಡ್ಡಿಯನ್ನು ಪಾವತಿಸಿರುವುದಿಲ್ಲ ಹಾಗಾಗಿ ಸಾಲ ಮರುಪಾವತಿ ಬಾಕಿ ಇದ್ದು, ನಂತರ ನೀವು ಜಾಮೀನುದಾರನಾಗಿದ್ದರಿಂದ ಆ ಬಾಕಿ ಸಾಲವನ್ನು ಮರುಪಾವತಿಸಲು, ನೀವು ದಿನಾಂಕಃ 21-10-2020 ರ ನಿಮ್ಮ ಸಿಂಡಿಕೇಟ್ ಬ್ಯಾಂಕ್ ಅವರ್ಸಾ ಶಾಖೆಯ ನಿಪಿ. 1 ಚೆಕ್ ಸಂಖ್ಯೆ005394 ನ್ನು ರೂ. 17,01,000/- ಪಿರ್ಯಾದಿ ಸಂಸ್ಥೆಗೆ ನೀಡಿ, ತಮ್ಮ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಹಣವಿದೆ ಎಂದು ಭರವಸೆ ನೀಡಿರುತ್ತೀರಿ ಎಂದು ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರಃ ಸುಳ್ಳು

ಪ್ರ.4 ಫಿರ್ಯಾದಿ.1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ಸದರಿ ಚೆಕ್ ನ್ನು ನಗದಿಕರಣಕ್ಕಾಗಿ ಕೆ.ಡಿ.ಸಿ.ಸಿ. ಬ್ಯಾಂಕ್ ನಿಯಮಿತ, ಅಂಕೋಲಾ ಶಾಖೆ ಸಲ್ಲಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ನಿಪಿ. 2 ಬ್ಯಾಂಕ ಹಿಂಬರಹದೊಂದಿಗೆ ದಿನಾಂಕ 23-10-2020 ರಂದು ಸದರಿ ಚೆಕ್ ವಾಪಾಸು ಬಂದಿರುತ್ತದೆ ಎಂದು ನುಡಿದರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರಃ ಸುಳ್ಳು

ಪ್ರ.5 ಫಿರ್ಯಾದಿ.1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ನಿಮಗೆ ಸದರಿ ಚೆಕ್ಕಿನ ಹಣವನ್ನು ಪಾವತಿಸುವಂತೆ ದಿನಾಂಕಃ11-11-2020 ರಂದು ವಕೀಲರ ಮೂಲಕ ರಿಜಿಸ್ಟರ್ಡ್ ನೋಟಿಸನ್ನು ನೀಡಿದ್ದು, ಸದರಿ ನೋಟಿಸನ್ನು ನೀವು ದಿನಾಂಕಃ23-11-2020 ರಂದು ತಿರಸ್ಕರಿಸಿದ್ದು, ನಂತರ ಸದರಿ ಚೆಕ್ಕಿನ ಹಣವನ್ನು ಪಾವಸಿರುವುದಿಲ್ಲ ಹಾಗೂ ಅದಕ್ಕೆ ಉತ್ತರಿಸಿರುವುದಿಲ್ಲ ಎಂದು ನುಡಿದಿರುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರಃ ಸುಳ್ಳು

ಪ್ರ.6 ನಿಮ್ಮ ಪರವಾಗಿ ಸಾಕ್ಷಿದಾರರು ಇದ್ದಾರೆಯೇ ?
ಉತ್ತರಃ ಇಲ್ಲ

ಪ್ರ.7 ನಿಮ್ಮ ಪರವಾಗಿ ಏನಾದರೂ ಹೇಳುವುದು ಇದೇಯೇ ?
ಉತ್ತರಃ ಇಲ್ಲ.

( ಆರೋಪಿತರಿಗೆ ಮೇಲಿನ ಪ್ರಶ್ನೆಗಳನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ, ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

ದಿನಾಂಕಃ 10-10-2023 (ಮನೋಹರ ಎಂ.)
ಅಂಕೋಲಾ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಅಂಕೋಲಾ.